ಅ) ಭಟ್ಕಳ ಮತ್ತು ಹೊನ್ನಾವರ ತಾಲ್ಲೂಕಿನ ಈ ಕೆಳಕಂಡ ಖಾಸಗಿ ಪ್ರವಾಸೋದ್ಯಮ ಯೋಜನೆಗಳಿಗೆ ಪ್ರವಾಸೋದ್ಯಮ ಇಲಾಖೆ ಸಹಾಯಧನ ನೀಡಿದೆ:-

1. ಪ್ರಭು ಗ್ರೂಪ್ ಆಫ್ ಹೋಟೆಲ್, ಹೊನ್ನಾವರ.
2. ಹೋಟೆಲ್ ಗುಡ್ ಲಕ್, ಹೊನ್ನಾವರ.
3. ಹೋಟೆಲ್ ಸಿದ್ದಾರ್ಥ, ಹೊನ್ನಾವರ.

ಆ) ಅನುದಾನ ಲಭ್ಯತೆ ಆಧಾರದ ಮೇರೆಗೆ ಸಹಾಯಧನ ನೀಡಲು ಕ್ರಮ ಕೈಗೊಳ್ಳಲಾಗುವುದು. ಸಹಾಯಧನವನ್ನು ನೀಡುವ ಬಗ್ಗೆ ಯಾವುದೇ ಅವ್ಯವಹಾರ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಇ) ಉದ್ಭವಿಸುವುದಿಲ್ಲ.

840(182) ಶ್ರೀ ಶಿವಾನಂದ ನಾಯಕ್ (ಭಟ್ಕಳ): ಮಾನ್ಯ ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

1. ಸರ್ಕಾರಿ ಕೈಗಾರಿಕಾ ತರಬೇತಿ (ಉದ್ಯೋಗ ಮತ್ತು ತರಬೇತಿ ಇಲಾಖೆ), ಹೊನ್ನಾವರದ ಜಮೀನು ಸಾರ್ವಜನಿಕರಿಂದ ಅತಿಕ್ರಮಣವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?
2. ಅತಿಕ್ರಮಣವಾಗಿದ್ದಲ್ಲಿ ಸಂಬಂಧಪಟ್ಟವರ ಮೇಲೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ?
3. ಅತಿಕ್ರಮಣ ತಡೆಗಟ್ಟಲು ಸರ್ಕಾರ ಸಂಬಂಧಿಸಿದ ಇಲಾಖೆಗೆ ಸೂಚಿಸಿದೆಯೇ?
4. ಭಟ್ಕಳ ತಾಲ್ಲೂಕಿನಲ್ಲಿ ಹೊಸದಾಗಿ ಕೈ.ತ.ಸಂಸ್ಥೆ. (ಐಟಿಐ) ಪ್ರಾರಂಭಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ ಹಾಗೂ ಈ ಯೋಜನೆ ಯಾವ ಹಂತದಲ್ಲಿದೆ? ಯಾವಾಗ ಪ್ರಾರಂಭಿಸಲಾಗುವುದು?
5. 2003-04ನೇ ಸಾಲಿನಲ್ಲಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯು ಕಾರವಾರದಲ್ಲಿ ನಡೆಸಿದ ಜಿಲ್ಲಾ ಮಟ್ಟದ ತರಬೇತಿದಾರರ ಪ್ರವೇಶ ಪರೀಕ್ಷೆಯಲ್ಲಿ ಹೆಚ್ಚಿನ ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಪ್ರವೇಶ ದೊರೆಯದೆ ಕಡಿಮೆ ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಪ್ರವೇಶ ಅವಕಾಶ ಕಲ್ಪಿಸಿರುವುದು ನಿಜವೇ?
6. ಇದರಲ್ಲಿ ಅವ್ಯವಹಾರ ನಡೆದಿರುವ ಬಗ್ಗೆ ಸರ್ಕಾರದ ನಿಲುವೇನು ಹಾಗೂ ಕೌನ್ಸಿಲಿಂಗ್ ಮೂಲಕ ಅರ್ಹರಿಗೆ ಅವಕಾಶ ಕಲ್ಪಿಸದೇ ಇರುವ ಕುರಿತು ಸರ್ಕಾರ ತನಿಖೆ ಮಾಡಲಾಗುವುದೇ?

ಶ್ರೀ ತನ್ವೀರ್ ಸೇಠ್ (ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು):

1. ಇಲ್ಲ.
2. ವರದಿಯೊಂದನ್ನು ತರಿಸಿಕೊಂಡು ಸತ್ಯವೆಂದು ಕಂಡುಬಂದಲ್ಲಿ ಕ್ರಮ ಕೈಗೊಳ್ಳಲಾಗುವುದು.
3. ಮೇಲಿನ (1)ರಲ್ಲಿ ತಿಳಿಸಿದ ಉತ್ತರದಿಂದ ಅನ್ವಯಿಸುವುದಿಲ್ಲ.
4. ಇತ್ತೀಚೆಗಷ್ಟೆ ಪ್ರಸ್ತಾವನೆ ಬಂದಿದ್ದು, ಜಮೀನು ಹಾಗೂ ಹಣಕಾಸು ಲಭ್ಯತೆಯನ್ನು ಪರಿಗಣಿಸಿ ಕ್ರಮ ಕೈಗೊಳ್ಳಲಾಗುವುದು.
5. ಸಿ.ಇ.ಟಿ. ಕೌನ್ಸಿಲಿಂಗ್ ಮಾದರಿಯಲ್ಲಿ ಪ್ರವೇಶ ಕಲ್ಪಿಸಲಾಗುತ್ತಿದೆ. ಆದ್ದರಿಂದ ಇಂತಹ ನ್ಯೂನತೆಗಳು ಉದ್ಭವಿಸುವುದಿಲ್ಲ.
6. ಅನ್ವಯಿಸುವುದಿಲ್ಲ.

841(993) ಶ್ರೀ ಶಿವಾನಂದ ನಾಯಕ್ (ಭಟ್ಕಳ): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಭಟ್ಕಳ ತಾಲ್ಲೂಕಿನ ತೆಂಗಿನಗುಂಡಿ ಬಂದರಿನಲ್ಲಿ ಹಿನ್ನೀರು ಯೋಜನೆಯ ಕಾಮಗಾರಿ ಕೆಲಸ ನಡೆಯುತ್ತಿರುವುದು ನಿಜವೇ?

ಆ) ಇದು ಯಾವ ಹಂತದಲ್ಲಿದೆ ಪ್ರಗತಿ ವಿವರಗಳನ್ನು ನೀಡುವುದು?

ಇ) ಇದರಿಂದ ಬಂದರಿನಲ್ಲಿ ಹೂಳು ತುಂಬಿ ಮೀನುಗಾರಿಕಾ ಯಾಂತ್ರಿಕ ಬೋಟುಗಳು ತೊಂದರೆಗೆ ಸಿಲುಕಿ ಪ್ರತಿ ವರ್ಷ ಮೀನುಗಾರರು ಮರಣ ಹೊಂದುತ್ತಿರುವುದು ನಿಜವೇ?

ಈ) ಈ ತೊಂದರೆ ನಿವಾರಿಸಲು ಸರ್ಕಾರ ಯಾವ ಯೋಜನೆ ರೂಪಿಸಲು ನಿರ್ಧರಿಸಿದೆ? (ವಿವರ ಒದಗಿಸುವುದು).

ಶ್ರೀ ಹೆಚ್. ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಹಿನ್ನೀರು ಯೋಜನೆಯ ಯಾವುದೇ ಕಾಮಗಾರಿ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

842(994) ಶ್ರೀ ಶಿವಾನಂದ ನಾಯಕ್ (ಭಟ್ಕಳ): ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹೊನ್ನಾವರ ಮತ್ತು ಭಟ್ಕಳ ತಾಲ್ಲೂಕುಗಳಲ್ಲಿ 1978ರ ಪೂರ್ವದಲ್ಲಿ ಅತಿಕ್ರಮಣ ಮಾಡಿದ ಜಮೀನಿನ ಸಕ್ರಮ ಕಾರ್ಯವನ್ನು ಸರ್ಕಾರ ಯಾವಾಗ ಪೂರ್ತಿಗೊಳಿಸುವುದು;

ಆ) ಇದುವರೆಗೂ ಸಕ್ರಮಗೊಳಿಸಬೇಕಾದ ಎಷ್ಟು ಪ್ರಕರಣಗಳು ಬಾಕಿ ಇವೆ. (ತಾಲ್ಲೂಕುವಾರು ವಿವರ ನೀಡುವುದು);

ಇ) ಅರಣ್ಯ ಇಲಾಖೆಯಲ್ಲಿ ಅರೆಕಾಲಿಕ (ಪಾರ್ಟ್‌ಟೈಂ) ನೌಕರರಾಗಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಯನ್ನು ಸರ್ಕಾರ ಯಾವಾಗ ಖಾಯಂಗೊಳಿಸುವುದು;

ಈ) ಪ್ರಧಾನ ಮಂತ್ರಿಯವರ ಗ್ರಾಮ ಸಡಕ್ ಯೋಜನೆಯಲ್ಲಿ ಸಂಪರ್ಕವಿಲ್ಲದೆ ಹಳ್ಳಿಗೆ ರಸ್ತೆ ಸಂಪರ್ಕ ಕಲ್ಪಿಸುವಾಗ ಅರಣ್ಯ ಇಲಾಖೆಯವರು ಅನಗತ್ಯ ತೊಂದರೆ ಕೊಡುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ (ಹೊನ್ನಾವರ ತಾಲ್ಲೂಕು ಮಹಿಮೆ ಗ್ರಾಮದಲ್ಲಿ)?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು:

ಅ) 1978ರ ಪೂರ್ವದಲ್ಲಿ ಹೊನ್ನಾವರ ಮತ್ತು ಭಟ್ಕಳ ತಾಲ್ಲೂಕುಗಳಲ್ಲಿ ಅತಿಕ್ರಮಣ ಮಾಡಿದ 481 ಪ್ರಕರಣಗಳು ಅರಣ್ಯ ಸಂರಕ್ಷಣಾ ಕಾಯ್ದೆ 1980ರ ಅಡಿ ಭಾರತ ಸರ್ಕಾರದಿಂದ ಅನುಮೋದಿತವಾಗಿವೆ.

ಈ ಪೈಕಿ 286 ಪ್ರಕರಣಗಳನ್ನು ರಾಜ್ಯ ಸರ್ಕಾರವು ವಿಧಿಸಲಾದ ಷರತ್ತುಗಳನ್ವಯ ಜಿಲ್ಲಾಧಿಕಾರಿ, ಉತ್ತರ ಕನ್ನಡ, ಕಾರವಾರ ಇವರು ಸಕ್ರಮಗೊಳಿಸಿ ಅಂತಿಮವಾಗಿ 285 ಪ್ರಕರಣಗಳಲ್ಲಿ ಪಟ್ಟಾ ನೀಡಿರುತ್ತಾರೆ. ಹೊನ್ನಾವರ ತಾಲ್ಲೂಕಿನ 1 ಪ್ರಕರಣದಲ್ಲಿ ಮಾತ್ರ ಪಟ್ಟಾ ನೀಡಲು ಬಾಕಿ ಇದೆ.

ಹೊನ್ನಾವರ ತಾಲ್ಲೂಕಿನ 37 ಮತ್ತು ಭಟ್ಕಳ ತಾಲ್ಲೂಕಿನ 93 ಒಟ್ಟು 130 ಪ್ರಕರಣಗಳು ಅರ್ಹ ಪ್ರಕರಣವಲ್ಲವೆಂದು ಜಿಲ್ಲಾಧಿಕಾರಿಗಳು ತಿರಸ್ಕರಿಸಿರುತ್ತಾರೆ.

ಉಳಿದ 65 ಪ್ರಕರಣಗಳು ಜಿಲ್ಲಾಧಿಕಾರಿಗಳಲ್ಲಿ ಬಾಕಿ ಇವೆ.

ಆ) ಹೊನ್ನಾವರ ತಾಲ್ಲೂಕಿನ 43 ಪ್ರಕರಣಗಳು ಮತ್ತು ಭಟ್ಕಳ ತಾಲ್ಲೂಕಿನ 22 ಒಟ್ಟು 65 ಪ್ರಕರಣಗಳು ಕಂದಾಯ ಇಲಾಖೆಯಲ್ಲಿ ಬಾಕಿ ಇರುತ್ತವೆ.